ತಡ ಗೂನು ಬೆನ್ನಿನ ಕರಡಿಯೊಂದು ನನ್ನನ್ನೇ ಗುರಿಯಾಗಿಸಿಕೊಂಡು ಓಡಿ ಬರುತ್ತಿದ್ದಂತೆ ಕಂಡು ಈಗಾಗಲೇ ನಡೆದು ದಣಿದಿದ್ದ ಕಾಲುಗಳಿಗೆ ಓಡು ಎಂದು ಅಪ್ಪಣೆಯನ್ನೇನೋ ಕೊಟ್ಟೆ. ತೊಡರುವ ಹಾಳುಬಿದ್ದ ಕೈಚೀಲದ ಭಾರದೊಂದಿಗೆ ಕಾಲಿಗೆ ಕೊರಟನಂತಹ ಚಪ್ಪಲಿಯನ್ನು ಮೆಟ್ಟಿದ್ದರಿಂದ ದೇಹದ ಸಮತೋಲನವನ್ನು ಕಾಪಾಡಿಕೊಂಡು ನಡೆಯಲು ಕಷ್ಟಪಡುತ್ತಿದ್ದ ಕಾಲುಗಳು ನನ್ನ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸಲು ಒಪ್ಪಬೇಕಲ್ಲ! ಆದರೂ ಜೀವಕ್ಕಿಂತ ಮಾನದ ಮೇಲಿನ ಆಸೆಯಿಂದ ಕುಂಟುವ ರೀತಿಯಲ್ಲಿ ಕಿತಾಬಿದ್ದು ಗಾಬರಿಯಿಂದ ಓಡತೊಡಗಿದರೆ ಹಿಂಬದಿಯಲ್ಲಿ ತೌರಿಕೊಂಡು ಬರುತ್ತಿದ್ದ ಆಕೃತಿ ಇನ್ನೂ ಸ್ಪಷ್ಟವಾಗುತ್ತಿದೆ ಎನ್ನುವಾಗಲೇ 'ದಾಕ್ಷಾಯಿಣಿ... ದಕ್ಷಾ... ನಿಲ್ಲೇ' ಎಂಬ ಧ್ವನಿ ಕಂಗಾಲಾದ ಜೀವಕ್ಕೆ ಭರಪೂರ್ ಶಕ್ತಿಯನ್ನಂತೂ ತಂದುಕೊಟ್ಟಿತು. ಸೈಕಲ್ಲಿನ ಎಲ್ಲಾ ಭಾಗಗಳೂ ಘಲಘಲ್ ಶಬ್ದ ಮಾಡುತ್ತಿದ್ದಿದ್ದು ಕೇಳಿಸುತ್ತಿದ್ದಂತೆಯೇ ಹಿಂಬಾಲಿಸಿ ಬರುತ್ತಿದ್ದಿದ್ದು ಕರಡಿಯಲ್ಲ ಚಿಕ್ಕಯ್ಯ ಲಟಾರಿ ಸೈಕಲ್ಲನ್ನೇರಿ ಸಮೀಪಿಸುತ್ತಿರುವುದು ಎಂದು ಖಾತ್ರಿಯಾಯಿತು. ಸೈಕಲ್ಲಿನ ಮೇಲೆ ಕುಳಿತ ಚಿಕ್ಕಪ್ಪನ ದೇಹ ಬಿಲ್ಲಿನಂತೆ ಬಾಗಿದ್ದರಿಂದ ಈ ಅರಮರ್ಧ ಕತ್ತಲೆಯಲ್ಲಿ ದೂರದಿಂದ ನನಗೆ ಕರಡಿಯಂತೆಯೇ ಕಂಡಿತ್ತು!!

ಬಿಳಲಿ ಬೆಂಡಾಗಿದ್ದ ನನ್ನ ಜೋಲು ಮುಖವನ್ನೂ ಲೆಕ್ಕಿಸದೆ ಚಿಕ್ಕಯ್ಯ ಜೋರು ಧ್ವನಿಯಲ್ಲಿ, 'ಮಳ್ಳು ಕೂಸೆ, ಯಾರ ಮಾತನ್ನದರೂ ಕೇಳಿ ಗೊತ್ತಿದೆಯಾ ನಿನಗೆ. ಪಿತ್ತ ನೆತ್ತಿಗೇರಿದವರದ್ದು ಒಂದು ರೀತಿಯಾದರೆ, ಓದು ನೆತ್ತಿಗೇರಿದವರದ್ದು ಇನ್ನೊಂದು ರೀತಿ. ತನ್ನ ಬಿಟ್ಟರಿಲ್ಲ ಲೋಕದಲ್ಲಿ ಅಂತಲೇ ಬದುಕುತ್ತಾರೆ...' ಎಂದು ರಸ್ತೆ ಮಧ್ಯದಲ್ಲೇ ಅರಚಾಡತೊಡಗಿದ. ಮಾತಿರಲಿ, ಮನಸ್ತಾಪವಿರಲಿ ಎಲ್ಲರೂ ಕಡೆಗೆ ತಿರುಗಿ ಬೀಳುವುದು ಒಂದೇ ವಿಷಯಕ್ಕೆ ಎಂದು ಬೇಸರವಾದರೂ ನನ್ನ ಪಾಲಿನ ಪಂಚಾಮೃತವೆಂದು ತಿಳಿದು ಸುಮ್ಮನುಳಿದೆ.

'ಕೈಯಲ್ಲಿ ಬಡಿಗೆ ಹಿಡಿದು ಹೊರಟಿದ್ದು ನೋಡಿದರೆ ಕರಡಿಯ ಬೇಟೆಗೆ ಹೊರಟಂತೆ ಕಾಣಿಸುತ್ತದೆ' ಎಂದು ಹಂಗಿಸುತ್ತಾ ಬಡಿಗೆಯಿದ್ದ ನನ್ನ ಕೈಗೆ ಚಿಣಿಪಿಣಿಗುಡುವ ಗಂಟೆಯೊಂದನ್ನು ಹಿಡಿಸಿದ.

'ಮನೆಯನ್ನು ತಲಪುವವರೆಗೂ ಈ ಗಂಟೆಯನ್ನು ಜೋರಾಗಿ ಬಾರಿಸುತ್ತಿರು. ಸೈಕಲ್ಲಿನ ಬೆಲ್ಲು ಕೆಟ್ಟುಹೋಗಿದೆ. ಒಂದೆರಡು ಬಾರಿ ನಮ್ಮೂರಿನ ಆಸುಪಾಸಲ್ಲೇ ಕರಡಿ ದಾಳಿ ಆದಾಗಿನಿಂದ ನಾವೆಲ್ಲ ಹೀಗೆ ಸಂಜೆ ಮೇಲೆ ಓಡಾಡುವ ಅವಶ್ಯಕತೆ ಬಿದ್ದರೆ ಸೈಕಲ್ಲಿನ ಬೆಲ್ಲನ್ನೋ, ಗಂಟೆಯನ್ನೋ ಬಾರಿಸುವುದನ್ನು ರೂಢಿಸಿಕೊಂಡಿದ್ದೇವೆ. ಕರಡಿ ಹತ್ತಿರದಲ್ಲೆಲ್ಲಾದರೂ ಇದ್ದರೆ ತನ್ನ ದಾರಿ ಬದಲಿಸಲಿ ಎಂದು' ಎಂದ ಚಿಕ್ಕಯ್ಯ.

ಸೈಕಲ್ಲಿನ ಹಿಂದಿನ ಕ್ಯಾರಿಯರ್ರಿನ ಮೇಲೆ ಕುಳಿತ ನನ್ನ ಮಡಿಲಲ್ಲಿ ಗೊಟಾರಿ ಚೀಲ ನೆಮ್ಮದಿಯ ನಿಟ್ಟುಸಿರಿಟ್ಟರೆ, ಈಗಾಗಲೇ ಹೈರಾಣಾಗಿದ್ದ ನಾನು ಬಹಳ ಶ್ರದ್ಧೆಯಿಂದ ಕರಡಿಯನ್ನು ಓಡಿಸುವ ಹೊಸ ಮತ್ತು ಸುಧಾರಿತ ಆಯುಧವಾದ ಚಿಣಿಪಿಣಿ ಗಂಟೆಯನ್ನು ಬಾರಿಸುತ್ತ ಕುಳಿತೆ.

ಪ್ರಧಾನ ಬಾಗಿಲಿಗೆರಡು ದೀಪವಿಟ್ಟು ಆಯಿ ಅಂಗಳದಂಚಿಗೆ ನಿಂತು ಕಾಯುತ್ತಿದ್ದಳು. ಹೊರಗಿನ ಅಂಕಣದಲ್ಲಿ ಹಾಕಿದ ಹೊಡಸಲಿನ ಮೇಲೆ ಸಿದ್ದಾಪುರದಿಂದ ತಂದಿದ್ದ ಉಪ್ಪಾಗೆ ಸಿಪ್ಪೆ ನಿಗಿನಿಗಿ ಬೆಂಕಿಗೆ ಒಣಗುತ್ತಲಿತ್ತು. ಹೆರ್ಪನಿಗೆ ಮತ್ತು ಚಿಕ್ಕಯ್ಯನಿಗೆ ವರ್ಷಪೂರ್ತಿ ಉಪ್ಪಾಗೆ ತುಪ್ಪವೇ ಆಗಬೇಕು. ಚೌತಿ ಹಬ್ಬದ ಅತ್ರಾಸಕ್ಕಂತೂ ನೆಂಚಿಕೊಳ್ಳಲು ಉಪ್ಪಾಗೆ ತುಪ್ಪ ಇರಲೇಬೇಕು. ಮೊದಲೆಲ್ಲಾ ಅತ್ರಾಸ ಕರಿಯುವುದೂ ಉಪ್ಪಾಗೆ ತುಪ್ಪದಲ್ಲಿಯೇ ಆಗಬೇಕಿತ್ತಂತೆ. ಈಗೆಲ್ಲ ಅಷ್ಟು ಪ್ರಮಾಣದ ತುಪ್ಪ ಮಾಡುವುದು ಕಷ್ಟವಾಗಿ, ಶ್ರಮಕ್ಕಿಂತ ಸುಲಭವಾಗಿ ಕಡಿಮೆ ದರದಲ್ಲಿ ಸಿಗುವ ಡಾಲ್ಡಾ ಪರ್ಯಾಯವಾಗಿಬಿಟ್ಟಿದೆ.

ಮನೆಬಾಗಿಲಿಗೆ ಬರುತ್ತಿದ್ದಂತೆಯೇ ಮೂರ್ಮೂರು ತಾಸು ಕಿಬ್ಬಳ್ಳಿಯಲ್ಲಿ ನಾನು ಚಿಕ್ಕಯ್ಯನಿಗಾಗಿ